## ತ್ರಿಕೋನ ಮಾಡುತ್ತೇನೆ



ನಾನು ಕೆಲವು ವರ್ಷಗಳ ಹಿಂದೆ ಹುಬ್ಬಳ್ಳಿಯ ಬ್ಯಾಂಕೊಂದರಲ್ಲಿ ಕೆಲಸ ಮಾಡುತ್ತಿದ್ದೆ. ಚಾಕ್ ಎಂಬುವರು ಬ್ಯಾಂಕಿನ ಮ್ಯಾನೇಜರ್ ಆಗಿದ್ದರು. ಅದೊಂದು ದಿನ ನಮ್ಮ ಬ್ಯಾಂಕಿನ ಆಫೀಸರ್ ಆರ್.ಎಲ್. ಪೈ ಅವರಿಗೂ ಚಾಕ್ ಅವರಿಗೂ ಕ್ಲಿಯರಿಂಗ್ ವಿಷಯದಲ್ಲಿ ಜಟಾಪಟಿ ನಡೆಯಿತು. ಮಾತಿಗೆ ಮಾತು ಬೆಳೆದು ಸಿಟ್ಟಿಗೆದ್ದ ಪೈ, 'ಮಿ. ಚಾಕ್ ನಿನ್ನ ಮುಖವನ್ನು ತ್ರಿಕೋನ ಮಾಡುತ್ತೇನೆ' ಎಂದಾಗ ನಾವೆಲ್ಲ ನಕ್ಕಿದ್ದೇ ನಕ್ಕಿದ್ದು!

**ಪಿ. ಜಯವಂತ ಪೈ**

## ಹುಡುಗಿ

ಬೀದರ್‌ನಲ್ಲಿ ರಾಜ್ಯ ನಿಗಮವೊಂದರ ಹೊಸ ಕಚೇರಿಯನ್ನು ತೆರೆದು ಕಾರ್ಯಾರಂಭ ಮಾಡಿದ್ದೆ. ಅಲ್ಲಿನ ಬೇಸಿಗೆಯ ಒಂದು ದಿನ ಹುಮ್ನಾಬಾದಿನಿಂದ ಹೊರಟ ಕೆಂಪು ಬಸ್ಸಿನಲ್ಲಿ ತೂಕಡಿಸುತ್ತಿದ್ದೆ. 'ಹುಡ್ಗೀರು ಇಳ್ಕಳಿ, ಹುಡ್ಗೀರು ಇಳ್ಕಳಿ' ಎಂದು ಕಂಡಕ್ಟರ್ ಕೂಗುತ್ತಿದ್ದ ಸದ್ದಿಗೆ ಎಚ್ಚರವಾಗಿ, ಮಂಪರಿನಲ್ಲೇ ಕಣ್ಣು ಬಿಟ್ಟೆ. ಬಸ್ಸಿನಲ್ಲಿದ್ದ ಹುಡುಗಿಯರು ಕುಳಿತೇ ಇದ್ದರು. ಒಂದಿಬ್ಬರು ವಯಸ್ಕರು, ನಂತರ ಒಬ್ಬ ಅಜ್ಜಿ ಬಾಗಿಲ ಕಡೆಗೆ ಹೊರಟರು. ನಾನು ಅಜ್ಜಿಗೆ, 'ನೀನು ಹುಡ್ಗೀನಾ' ಎಂದು ಛೇಡಿಸಿದೆ. 'ಹೌದು' ಎನ್ನುವಂತೆ ತಲೆಯಾಡಿಸಿ, ಅಜ್ಜಿ ಇಳಿದಳು. ಯಾವ ಹುಡುಗಿಯೂ ಇಳಿಯಲಿಲ್ಲ. ನಾನು ಗೊಂದಲದಲ್ಲಿರುವಂತೆಯೇ ಕಂಡಕ್ಟರ್, 'ರೈಯಾ' ಎಂದು ಕೂಗಿದ್ದು ಕೇಳಿಸಿತು. ಹೊರಟ ಬಸ್ಸು ಮುಂದೆ ಚಲಿಸಿದಾಗ, ರಸ್ತೆ ಬದಿಯಲ್ಲಿ ಕಾಣಿಸಿತು, ಆ ಊರಿನ ನಾಮಫಲಕ 'ಹುಡುಗಿ'.



**ಹಾಡ್ಯ ಬಿ. ಜಯಾನಂದ**